**PW-1** OS376/2012

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಅಸಲು ದಾವೆ. ಸಂಖ್ಯೆ:376/2012**

ಡಿ.ಡಬ್ಲೂ:01 ಶ್ರೀ ರಾಮಶೇಖರ್ ರೆಡ್ಡಿ

**ಸಾಕ್ಷಿಯನ್ನು ದಿನಾಂಕಃ 01-08-2025 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀಸವಾಲು ಃ ವಾದಿಯ ಪರ ಶ್ರೀ ಜೆಪಿ ವಕೀಲರಿಂದ**

**1.** ನಿಪಿ.**248** ರ ನಿವೇದನೆಗೆ ಸಂಬಂದಪಟ್ಟಂತೆ ಸಂಬಂದ ಪಟ್ಟ ಇಲಾಖೆಯವರು ನಿಪಿ.**161** ರಂತೆ ಹಿಂಬರಹ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.**250** ರ ನಿವೇದನೆಗೆ ಸಂಬಂದಪಟ್ಟಂತೆ ಸಂಬಂದ ಪಟ್ಟ ಇಲಾಖೆಯವರು ನಿಪಿ.**162** ರಂತೆ ಹಿಂಬರಹ ನೀಡಿರುತ್ತಾರೆ ಎಂದರೆ ಸರಿ. ಮೇಲೆ ಹೇಳಿದ **161** ಮತ್ತು **162** ಹಿಂಬರಹಗಳು ನಾನು ಹಾಜರುಪಡಿಸಿದ ನಿಡಿ **8** ರ ಜೊತೆ ಹಾಜರುಪಡಿಸಿದ ತಾಳೆ ಪಟ್ಟಿಗೆ ಸಂಬಂದಿಸಿದ್ದು ಅದರಲ್ಲಿ ಅವರು ಅಂತಹ ಯಾವುದೇ ತಾಳೆಪಟ್ಟಿ ಕೊಟ್ಟಿಲ್ಲ ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ **8** ರ ಜೊತೆ ಇರುವ ತಾಳೆಪಟ್ಟಿಗೆ ಸಂಬಂದ ಪಟ್ಟಂತೆ ನನ್ನ ಅತ್ತೆ ಆದ **1** ನೇ ಪ್ರತಿವಾದಿ ಆದ ಕಮಲಮ್ಮ ರವರು ನೀಡಿರುತ್ತಾರೆ. ನಿಡಿ **8** ರ ಜೊತೆ ಇರುವ ತಾಳೆ ಪಟ್ಟಿಯಲ್ಲಿ ಸದರಿ ನನ್ನ ಅತ್ತೆ ಆದ ಪ್ರತಿವಾದಿ ಕಮಲಮ್ಮ ರವರ ಹೆಸರು ಇಲ್ಲ ಎಂದರೆ ಸರಿ .ಸದರಿ ತಾಳೆ ಪಟ್ಟಿಯಲ್ಲಿ ಜಿ ಆರ್ ಜಯರಾಮರೆಡ್ಡಿ ಎಂದು ಹೆಸರು ನಮೂದಿದೆ ಎಂದರೆ ಹೌದು. ಸದರಿ ಜಿ ಆರ್ ಜಯರಾಮರೆಡ್ಡಿರವರ ತಾಯಿಯ ಹೆಸರು ರಂಗಮ್ಮ ಎಂದಾಗಿರುತ್ತದೆ.

**2.** ಸದರಿ ರಂಗಮ್ಮ ಮತ್ತು ಅವರ ಮಕ್ಕಳು ದಾರಂ ಕೃಷ್ಣಪಲ್ಲಿ ಜಮೀನುಗಳಿಗೆ ಸಂಬಂದ ಪಟ್ಟಂತೆ ತಮಗೆ ರಿಗ್ರಾಂಟ್ ಮಾಡಿಕೊಡಿ ಎಂದು ಸಂಬಂದ ಪಟ್ಟ ಇಲಾಖೆಗೆ ಯಾವುದೇ ಅರ್ಜಿ ಹಾಕಿಲ್ಲ ಎಂದರೆ ಸರಿ. ಸದರಿ ನಿಡಿ **8** ರ ಜೊತೆ ಇರುವ ತಾಳೆ ಪಟ್ಟಿಯು ಸಂಬಂದ ಪಟ್ಟ ಇಲಾಖೆಯಲ್ಲಿ ಇಲ್ಲದೇ ಇದ್ದರೂ ಸಹ ನಾನೇ ಅವರ ಸೀಲು ಮತ್ತು ಸಹಿಗಳನ್ನು ದುರುಪಯೋಗ ಮಾಡಿಕೊಂಡು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಂದು ಆಸ್ತಿಯು **2** ಎಕರೆ ಇದ್ದು ಆ ಹಳೆ ಸರ್ವೆ ನಂಬರನ್ನು ಹೊಸ ಸರ್ವೆ ನಂಬರ್ ಆಗಿ ಪೋಡಿ ಮಾಡುವುದಿದ್ದರೆ ತಲಾ **20** ಗುಂಟೆಯಂತೆ ಹೊಸ ನನಂಬರ್ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ನಿಡಿ **8** ರ ಜೊತೆ ಹಾಜರುಪಡಿಸಿದ ತಾಳೆಪಟ್ಟಿಯಲ್ಲಿ ಸರ್ವೆ ನಂ.**33** ದಾರಂ ಕೃಷ್ಣಪಲ್ಲಿಯ ಜಮೀನು ನಮೂದಿದೆ ಎಂದರೆ ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ ಇದೆ ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ಸರ್ವೆ ನಂ.**33** ಕೊನೆಯ ಕ್ರಮ ಸಂಖ್ಯೆಯಲ್ಲಿ ನಮೂದಿದೆ ಎಂದರೆ ಹೌದು. ಸದರಿ ದಾಖಲೆಯಲ್ಲಿ ಸರ್ವೆ ನಂ.**33** ರ ಪಕ್ಕದಲ್ಲಿ ಕೆಲವು ಇತರ ನಂಬರುಗಳನ್ನು ನಮೂದು ಮಾಡಿರುತ್ತಾರೆ ಎಂದರೆ ಸರಿ. ಸದರಿ ನಿಡಿ **8** ರ ಜೊತೆ ಹಾಜರುಪಡಿಸಿದ ತಾಳೆಪಟ್ಟಿಯಲ್ಲಿ ಇತರ ಸರ್ವೆ ನಂಬರ್ ಗಳಿಗೆ ಬರಿ ಒಂದೇ ನಂಬರ್ ನಮೂದು ಮಾಡಿದ್ದು ಸರ್ವೆ ನಂ.**33** ರ ಬಳಿ ಹಲವು ನಂಬರ್ ಗಳನ್ನು ನಮೂದು ಮಾಡಲಾಗಿರುತ್ತದೆ ಎಂದರೆ ಹೌದು.

**3.** ಸರ್ವೆ ನಂ.**33** ಒಟ್ಟು ವಿಸ್ತೀರ್ಣ **1** ಎಕರೆ **10** ಗುಂಟೆ ಎಂದರೆ ಹೌದು. ಸದರಿ ಸರ್ವೆ ನಂ.**33** ರಲ್ಲಿ ನಮೂದು ಮಾಡಿರುವ ಸರ್ವೆ ನಂ.**23** ರ ವಿಸ್ತೀರ್ಣವು **2** ಎಕರೆ **24** ಗುಂಟೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ಸರ್ವೆ ನಂ.**23** ರ ಪಹಣಿಯನ್ನು ನೋಡಿರುವುದಿಲ್ಲ. ಸರ್ವೆ ನಂ.**24** ವಿಸ್ತೀರ್ಣವು **7** ಎಕರೆಗಿಂತ ಮೇಲೆ ಇರುತ್ತದೆ. ಸದರಿ ಸರ್ವೆ ನಂ.**24** ಒಟ್ಟು ವಿಸ್ತೀರ್ಣ **8** ಎಕರೆ **36** ಗುಂಟೆ ಇರುತ್ತದೆ ಎಂದರೆ ಹೌದು. ಸದರಿ ಸರ್ವೆ ನಂ.**33** ರ ತಾಳೆಯಲ್ಲಿ ಬರೆದ ಇನ್ನೊಂದು ಸರ್ವೆ ನಂ.**33**, **6** ಎಕರೆ **30** ಗುಂಟೆ

ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ 5 ಎಕರೆ ಗಿಂತ ಮೇಲೆ ಇದೆ ಎನ್ನುತ್ತಾರೆ. ಸದರಿ ಸರ್ವೆ ನಂ.36 ವಿಸ್ತೀರ್ಣವು 29 ಗುಂಟೆ ಇದೆ ಎಂದರೆ ಸರಿ. ಸದರಿ ಸರ್ವೆ ನಂ.3 ರ ವಿಸ್ತೀರ್ಣವು 6 ಎಕರೆ 4 ಗುಂಟೆ ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ ಅದು 5 ಎಕರೆ ಗಿಂತ ಮೇಲೆ ಇದೆ ಎನ್ನುತ್ತಾರೆ. ಸರ್ವೆ ನಂ.38 ವಿಸ್ತೀರ್ಣವು 4 ಎಕರೆ 34 ಗುಂಟೆ ಇರುತ್ತದೆ ಎಂದರೆ ಸರಿ. ಸರ್ವೆ ನಂ.39 ವಿಸ್ತೀರ್ಣವು 4 ಎಕರೆ 11 ಗುಂಟೆ ಇದೆ ಎಂದರೆ ಸರಿ. ಸರ್ವೆ ನಂ.40 ವಿಸ್ತೀರ್ಣವು 5 ಎಕರೆ 15 ಗುಂಟೆ ಇದೆ ಎಂದರೆ ಸರಿ. ಸರ್ವೆ ನಂ.41 ವಿಸ್ತೀರ್ಣವು 8 ಎಕರೆ 6 ಗುಂಟೆ ಇದೆ ಎಂದರೆ ಸಾಕ್ಷಿಯು ಇಲ್ಲ ಸುಮಾರು 7 ಎಕರೆಗಿಂತ ಮೇಲೆ ಇದೆ ಎನ್ನುತ್ತಾರೆ. ಸರ್ವೆ ನಂ.42 ವಿಸ್ತೀರ್ಣವು 6 ಎಕರೆ 39 ಗುಂಟೆ ಇದೆ ಎಂದರೆ ಸರಿ. ಸದರಿ ಮೇಲೆ ಹೇಳಿದ ವಿಸ್ತೀರ್ಣಗಳಲ್ಲಿ ಖರಾಬ್ ಲ್ಯಾಂಡ್ ಕೂಡ ಸೇರಿದೆ ಎಂದರೆ ಸರಿ. ಸದರಿ ಒಟ್ಟು ವಿಸ್ತೀರ್ಣವನ್ನು ಸೇರಿಸಿದರೆ 54 ಎಕರೆ 38 ಗುಂಟೆ ಬರುತ್ತದೆ ಎಂದರೆ ಇರಬಹುದು. ಸಾಕ್ಷಿಯು ಮುಂದುವರೆದು ಅದರಲ್ಲಿ ಸರ್ವೆ ನಂ.43 ವಿಸ್ತೀರ್ಣ 7 ಎಕರೆ ಬರುತ್ತದೆ ಅದು ಬಿಟ್ಟು ಹೋಗಿದೆ ಎನ್ನುತ್ತಾರೆ.

**4.** ಯಾವ ಆಸ್ತಿಯು ತಾಳೆ ಮಾಡಿ ಇನ್ನೊಂದು ಸರ್ವೆ ನಂಬರ್ ನಮೂದು ಮಾಡಿದ್ದರೂ ಸಹ ಅದರ ವಿಸ್ತೀರ್ಣಗಳು ಬದಲಾವಣೆ ಆಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.33 , 1 ಎಕರೆ 10 ಗುಂಟೆ ಇದ್ದು ಅದು ಯಾವತ್ತೂ ಸಹ 54 ಎಕರೆ 38 ಗುಂಟೆ ಆಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ನಾನು ಹೇಳಿದಂತೆ ನಿಡಿ 8 ರ ಜೊತೆ ಕೊಟ್ಟಂತಹ ತಾಳೆ ಪಟ್ಟಿ ಆಸ್ತಿಗಳು ಅಸ್ತಿತ್ವದಲ್ಲಿ ಇಲ್ಲದೇ ಇರುವ ಕಾರಣ ಅವರು ಮೇಲೆ ಹೇಳಿದಂತೆ 2 ಹಿಂಬರಹಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಡಿ 8 ರ ಜೊತೆ ಕೊಟ್ಟಂತಹ ತಾಳೆಪಟ್ಟಿ ಆಸ್ತಿಗಳು ಅಸ್ತಿತ್ವದಲ್ಲಿ ಇಲ್ಲದೇ ಇದ್ದರೂ ಸಹ ನಾನು ನನಗೆ ಬೇಕಾದ ವ್ಯಕ್ತಿಗಳೊಂದಿಗೆ ಸೇರಿಕೊಂಡು ಅದನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸುಳ್ಳು,

**5.** ನನ್ನ ಪ್ರಕಾರ ನಾನು ಹೇಳಿದಂತೆ ಮರುಮಂಜೂರು ಯಾರಿಗೆಲ್ಲಾ ಆಗಿರುತ್ತದೆ ಎಂದರೆ ಸಾಕ್ಷಿಯು ಶ್ರೀರಾಮರೆಡ್ಡಿಗೆ ವಿಸ್ತೀರ್ಣವು 38 ಎಕರೆ 8 ಗುಂಟೆ ಆಸ್ತಿ, ಸುಬ್ಬಮ್ಮರವರಿಗೆ ವಿಸ್ತೀರ್ಣವು 32.30 ಆಸ್ತಿ , ಕಮಲಮ್ಮ ರವರಿಗೆ 32.50 ಆಸ್ತಿ, ದೋಬಿ ವೆಂಕಟರಾಮಪ್ಪರವರಿಗೆ 22 ಎಕರೆ ಆಗಿರುತ್ತದೆ. ಮೇಲೆ ಹೇಳಿದ ಶ್ರೀರಾಮರೆಡ್ಡಿಗೆ ಮರು ಮಂಜೂರಾದ ಆಸ್ತಿಯ ಕೇಸ್ ಸಂಖ್ಯೆ 251/1963-64 ಆಗಿರುತ್ತದೆ. ಸುಬ್ಬಮ್ಮರವರಿಗೆ ಮರುಮಂಜೂರಾದ ಆಸ್ತಿಯ ಕೇಸ್ ಸಂಖ್ಯೆ 252/1963-64, ಕಮಲಮ್ಮ ರವರಿಗೆ ಮರುಮಂಜೂರಾದ ಆಸ್ತಿಯ ಕೇಸ್ ಸಂಖ್ಯೆ 253/1963-64 ಮತ್ತು ದೋಬಿ ವೆಂಕಟರಾಮಪ್ಪನವರಿಗೆ ಮರು ಮಂಜೂರಾದ ಆಸ್ತಿಯ ಕೇಸ್ ಸಂಖ್ಯೆ 254/1963-64 ಆಗಿರುತ್ತದೆ. ಸದರಿ ಶ್ರೀ ರಾಮರೆಡ್ಡಿಗೆ ಸರ್ವೆ ನಂ.22 ರಿಂದ 26, 12 , 13 , 18, 19 ಮರುಮಂಜೂರಾಗಿರುತ್ತದೆ. ಸದರಿ ಸರ್ವೆ ನಂಬರ್ ಗಳಲ್ಲಿ ನನ್ನ ಪ್ರಕಾರ ಎಷ್ಟೆಷ್ಟು ವಿಸ್ತೀರ್ಣಗಳು ಶ್ರೀರಾಮರೆಡ್ಡಿರವರಿಗೆ ಮಂಜೂರಾಗಿರುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ಸುಬ್ಬಮ್ಮ ರವರಿಗೆ ಮರುಮಂಜೂರಾದ ಸರ್ವೆ ನಂಬರ್ ಗಳು 1, 2,4, 6 ರಿಂದ 8 ಆಗಿರುತ್ತದೆ. ಸದರಿ ಸರ್ವೆ ನಂಬರ್ ಗಳಲ್ಲಿ ನನ್ನ ಪ್ರಕಾರ ಎಷ್ಟೆಷ್ಟು ವಿಸ್ತೀರ್ಣಗಳು ಸುಬ್ಬಮ್ಮರವರಿಗೆ ಮಂಜೂರಾಗಿರುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ಕಮಲಮ್ಮ ರವರಿಗೆ ಮರುಮಂಜೂರಾದ ಸರ್ವೆ ನಂಬರ್ ಗಳು 5, 13, 14, 21, 26 ರಿಂದ 29 ಆಗಿರುತ್ತದೆ. ಸದರಿ ಸರ್ವೆ ನಂಬರ್ ಗಳಲ್ಲಿ ನನ್ನ ಪ್ರಕಾರ ಎಷ್ಟೆಷ್ಟು ವಿಸ್ತೀರ್ಣಗಳು ಕಮಲಮ್ಮರವರಿಗೆ ಮಂಜೂರಾಗಿರುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ.

**6.** ಸದರಿ ದೋಬಿ ವೆಂಕಟರಾಮಪ್ಪ ರವರಿಗೆ ಮರುಮಂಜೂರಾದ ಸರ್ವೆ ನಂಬರ್ ಗಳು 9 ಮತ್ತು 11 ಆಗಿರುತ್ತದೆ. ಸದರಿ ಸರ್ವೆ ನಂಬರ್ ಗಳಲ್ಲಿ ನನ್ನ ಪ್ರಕಾರ ಎಷ್ಟೆಷ್ಟು ವಿಸ್ತೀರ್ಣಗಳು ದೋಬಿ ವೆಂಕಟರಾಮಪ್ಪರವರಿಗೆ ಮಂಜೂರಾಗಿರುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ. ನನ್ನ ಪ್ರಕಾರ ಮೇಲೆ

ಹೇಳಿದ ವ್ಯಕ್ತಿಗಳು ಇದೇ ಸರ್ವೆ ನಂಬರ್ ಗಳಲ್ಲಿ ಆಸ್ತಿಗಳನ್ನು ಮರು ಮಂಜೂರು ಮಾಡಬೇಕೆಂದು ಕೇಳಿಕೊಂಡಿರುವುದಿಲ್ಲ. ಸದರಿ ವ್ಯಕ್ತಿಗಳು ತಮ್ಮ ಅರ್ಜಿಯಲ್ಲಿ ಏನು ಹೇಳಿರುತ್ತಾರೆ ಎಂದು ನನಗೆ ನಿರ್ದಿಷ್ಟವಾಗಿ ಗೊತ್ತಿಲ್ಲ. ಸದರಿ ಅರ್ಜಿಯನ್ನು ಮೇಲೆ ಹೇಳಿದ ವ್ಯಕ್ತಿಗಳು ವಿಶೇಷ ಜಿಲ್ಲಾದಿಕಾರಿಗಳು ಬಂಗಾರಪೇಟೆ ರವರ ಮುಂದೆ ಹಾಕಿರುತ್ತಾರೆ. ಸದರಿ ಅರ್ಜಿಗಳಪ್ರತಿಗಳನ್ನು ನಾನನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನಾ ಎಂದರೆ ಕೊಟ್ಟಿರುತ್ತೇನೆ. ನನಗೆ ಸದರಿ ಪ್ರಕರಣಗಳಿಗೆ ಸಂಬಂದ ಪಟ್ಟಂತೆ ಯಾವುದೇ ಮಾಹಿತಿಯನ್ನು ನಾನು ಪಡೆದುಕೊಂಡಿರುವುದಿಲ್ಲ. ಸದರಿ ಪ್ರಕರಣಗಳಲ್ಲಿ ನಾನು ಹೋಗಿ ಹಾಜರಾಗಿರುವುದಿಲ್ಲ. ನಾನು ಈ ದಾವೆಯಲ್ಲಿ ಮೊದಲು ನನ್ನ ಅತ್ತೆಯಾದ ಪ್ರತಿವಾದಿಯು ಹಾಜರಾಗುತ್ತಿದ್ದ ಸಂದರ್ಬದಲ್ಲಿ ನಾನು ಅವರ ಜೊತೆ ಬರುತ್ತಿದ್ದೇನಾ ಎಂದರೆ ಇಲ್ಲ.

**ಮುಂದುವರೆದ ಪಾಟೀಸವಾಲಿಗೆ ವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**